*(ಸಾಕ್ಷಿಯನ್ನು ದಿನಾಂಕಃ-21-01-2021 ರಂದು ಸಾಕ್ಷಿಗೆ ಸತ್ಯಪ್ರಮಾಣ ಭೋಧಿಸಲಾಯಿತು)*

ಮುಂದುವರೆದ ಪಾಟೀ ಸವಾಲು ಶ್ರೀ. ಡಿ ಎ ಹೆಚ್ ಯವರಿಂದ ಃ ಪ್ರತಿವಾದಿ ಪರವಾಗಿ

ಹಾಲಸಮುದ್ರ ಗ್ರಾಮದಲ್ಲಿ ಸರ್ವೆ ನಂಃ 66/*/ಎ ಪಿ 2/ಪಿ1 ರಲ್ಲಿ 4 ಎಕರೆ 28 ಗುಂಟೆ ಜಮೀನು ನನನ ಮಗನ ಹೆಸರಿನಲ್ಲಿ ಇದೆ ಎನ್ನುವುದು ನಿಜ. ಆ ಜಮೀನನ್ನು ಆತನ ತಂದೆ ಆತನ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಯಾವಾಗ ಎಂದು ನನಗೆ ನೆನಪಿಲ್ಲ. ಅದು ನಿಮ್ಮ ಕುಟುಂಬದ ಆಸ್ತಿನಾ? ಅವರ ತಂದೆ ಖರೀದಿ ಮಾಡಿದ್ದಾರೆ ಆದುದರಿಂದ ಹೌದು.

ನನ್ನ ಗಂಡ ತೀರಿಕೊಂಡ 3 ವರ್ಷದ ನಂತರ ಸೊಸೆ ತೀರಿಕೊಂಡಿದ್ದಾಳೆ ಆ ನಂತರ ನಮ್ಮ ಮನೆಯಲ್ಲಿ ನಾನು, ನನ್ನ ಮಗ ಹಾಗೂ ಮೊಮ್ಮಗ ಒಟ್ಟಿಗೆ ಇರುತ್ತೇವೆ. ನಮ್ಮ ಕುಟುಂಬಕ್ಕೆ ಒಕ್ಕಲುತನ ಬಿಟ್ಟರೆ ಬೇರೆ ಯಾವುದೇ ಉದ್ಯೋಗ ಇಲ್ಲ. ನನ್ನ ಮಗಳು ಲಕ್ಷ್ಮಿ ಇವಳ ಮದುವೆಯಾಗಿ 28-30 ವರ್ಷ ಕಳೆದಿರುತ್ತದೆ. ಸಿಂಧನೂರು ತಾಲೂಕಿನ ಬೂದಾಳ್ ಕ್ಯಾಂಪಗೆ ನನ್ನ ಮಗಳನ್ನು ಕೊಟ್ಟಿದ್ದೇನೆ. ಲಗ್ನಆದಾಗಿನಿಂದ ನನ್ನ ಮಗಳು ಗಂಡನ ಮನೆಯಲ್ಲಿ ಇದ್ದಾಳೆ ಎನ್ನುವುದು ಸರಿ. ಈಗ 15 ವರ್ಷದಿಂದ ಆಕೆ ಮತ್ತು ಅವಳ ಗಂಡ ಸಾಲುಂಚಿಮರ ಗ್ರಾಮದಲ್ಲಿ ಬೇಸಾಯ ಮಾಡಿಕೊಂಡು ಇದ್ದಾರೆ. ನನ್ನ ಮಗಳು ಹಾಗೂ ಅಳಿಯ ಮರ್ಲಾನಹಳ್ಳಿಯ ಸಾಲುಂಚಿಮರ ಗ್ರಾಮದಲ್ಲಿ 15 ವರ್ಷಗಳಿಂದ ವಾಸವಾಗಿದ್ದಾರೆ ಎಂದು ತೋರಿಸುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಮೊಮ್ಮಗ ನಮ್ಮೂರಿನ ಶಾಲೆಯಲ್ಲಿ 10 ನೇ ತರಗತಿ ವರೆಗೆ ಓದಿದ್ದಾನೆ ಹಾಗೂ ನನ್ನನೊಡನೆ ಇದ್ದಾನೆ. ನನ್ನ ಮೊಮ್ಮಗನ ವಿದ್ಯಾಬ್ಯಾಸದ ಖರ್ಚನ್ನು ನನ್ನ ಮಗನೇ ಮಾಡಿರುತ್ತಾನೆ. ಮನೆಯ ಯಜಮಾನಿಕೆಯನ್ನು ನನ್ನ ಗಂಡ ಇದ್ದಾಗ ಅವರು ಮಡುತ್ತಿದ್ದರು ಅವರು ತೀರಿಕೊಂಡ ನಂತರ ನಾನು ಮಾಡುತ್ತಿದ್ದೇನೆ. ಜಮೀನಿನ ಸಾಗುವಳಿಯನ್ನು ನೀವೇ ಮಾಡುತ್ತಿರಾ? ಸಾಕ್ಷಿಯು ಇಲ್ಲಾ ನಾನೇ ಮಾಡುತ್ತೇನೆ ಪುನಃ ಸಾಕ್ಷಿಯು ಮೊಮ್ಮಗ ಹೋದಾಗ ನಾನು ಹಿಂದೆ ಹೋಗುತ್ತೇನೆ ಎಂದು ಹೇಳುತ್ತಾರೆ. ನಾನು ಹಾಗೂ ನನ್ನ ಮೊಮ್ಮಗ ದವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದ ಬಗ್ಗೆ ಪಹಣಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಪಹಣಿ ದಾಖಲೆಯಲ್ಲಿ ಸಾಗುವಳಿ ದಾರರ ಕಾಲಂ ನಲ್ಲಿ ನಿಮ್ಮ ಮಗನ ಹೆಸರಿದೇ ಆತನೇ ಸಾಗುವಳಿ ಮಾಡುತ್ತಾನೆ ನೀವು ಸುಳ್ಳು ಹೇಳುತ್ತಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ಸುಳ್ಳು ಹೇಳುತ್ತಿಲ್ಲ ನನ್ನ ಮಗ ಇದ್ದಾಗ ಆತ ಸಾಗುವಳಿ ಮಾಡುತ್ತಿದ್ದ ಎನ್ನುವುದು ನಿಜ ಆತ ಹೋದಾಗನಿಂದ ನಾನು ಹಾಗೂ ನನ್ನ ಮೊಮ್ಮಗ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನನ್ನ ಮಗ ಬದುಕಿದ್ದನೆ. ನನ್ನ ಮಗ ಬ್ಯಾಂಕುಗಳಲ್ಲಿ ಕೂಡಾ ದಾವಾ ಆಸ್ತಿಯ ಮೇಲೆ ಬೆಳೆ ಸಾಲವನ್ನು ಪಡೆದುಕೊಂಡಿದ್ದಾನೆ ಎನ್ನುವುದು ನನಗೆ

ಗೊತ್ತಿಲ್ಲ. ನಾನು ಯಾವುದೇ ಬ್ಯಾಂಕಿಗೆ ಹೋಗಿ ನನ್ನ ಜಮೀನಿನ ಮೇಲೆ ನನ್ನ ಮಗನಿಗೆ ಸಾಲ ಕೊಡಬೇಡಿ ಎಂದು ಯಾವತ್ತು ಹೇಳಲಿಲ್ಲ.

ನನ್ನ ಮಗ ದಾವಾ ಆಸ್ತಿಯನ್ನು ಡಿ ಹೆಚ್ ಆರ್ ಇವರಿಗೆ ಮಾರಲು ಖರೀದಿ ಖರಾರು ಪತ್ರ ಬರೆದುಕೊಟ್ಟಿರುವ ವಿಷಯ ನನಗೆ 2017 ರಲ್ಲಿ ಗೊತ್ತಾಯಿತು. ನನ್ನ ಮಗ ಜೆ ಡಿ ಆರ್ ಇತನು ಡಿ ಹೆಚ್ ಆರ್ ಇವರಿಗೆ ಖರೀದಿ ಖರಾರು ಪತ್ರವನ್ನು ಯಾಕೆ ಬರೆದುಕೊಟ್ಟಿದ್ದಾನೆ ಎಂದು ಯಾರು ನನಗೆ ಹೇಳಲಿಲ್ಲ. ಜೆ ಡಿ ಆರ್ ರವರನ್ನು ನೀವು ಯಾಕೆ ದಾವಾ ಜಮೀನನ್ನು ಮಾರಲು ಒಪ್ಪಂದ ಮಾಡಿಕೂಂಡಿದ್ದಿಯಾ ಎಂದು ಕೇಳಿದ್ದೀರಾ? ನಾನು ಕೇಳಿದೆ ಆತ ಉತ್ತರ ಕೊಡಲಿಲ್ಲ. ನನ್ನ ಮಗನು ಖರೀದಿ ಖರಾರು ಪತ್ರ ಬರೆದುಕೊಟ್ಟಿದ್ದಾನೆ ಎಂದು ಗೊತ್ತಾದ ನಂತರ ನಾನು, ನನ್ನ ಮಗಳು ಹಾಗೂ ನನ್ನ ಮೊಮ್ಮಗ ಎಲ್ಲರು ಕೂಡಿಕೊಂಡು ನನ್ನ ಮಗನ ಮೇಲೆ ಯಾವುದೇ ಹಿಸ್ಸಾ ದಾವೆಯನ್ನು ಮಾಡಿಲ್ಲ.ನನ್ನ ಮಗ ದುಂದು ವೆಚ್ಚಗಾರ, ಜೂಜಾಟ ಆಡುತ್ತಾನೆ, ಕುಡಿಯುವ ಅಬ್ಯಾಸವನ್ನು ಇಟ್ಟುಕೊಂಡಿದ್ದಾನೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನಿಜ ಇರುತ್ತದೆ. ನನ್ನ ಗಂಡ ತೀರಿಕೊಂಡಾಗಿನಿಂದ ಈ ಕೆಟ್ಟ ಬುದ್ದಿಗಳು ನನ್ನ ಮಗನಿಗೆ ಇದೆ. ನನ್ನ ಗಂಡನು ಜನೇವರಿ 2006 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ ತೀರಿಕೊಂಡ 1 -2 ವರ್ಷದ ನಂತರ ಈ ಕೆಟ್ಟ ಅಬ್ಯಾಸಗಳನ್ನು ಪ್ರಾರಂಭಿಸಿದ. ಈ ವಿಷಯ ನನಗೆ ಆಗಲೇ ತಿಳಿದಿತ್ತು. ನನ್ನ ಮಗ ದುಷ್ಟಚಟಕ್ಕೆ ಬಿದ್ದಿ ನಂತರ ನಾನು ಆತ ಮಾಡಿರುವ ಮುಟೇಷನ್ ನ್ನು ಪ್ರಶ್ನಿಸಿಲ್ಲ ಯಾಕೆಂದರೆ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿದ್ದೇನೆ ಎಂದು ಹೇಳಿದ್ದ. ನಾನು ಸಾಲಕ್ಕೆ ಓಡಾಡಿದ್ದೇನೆ ನನಗೂ ಓದಲು ಹಾಗೂ ಬರೆಯಲು ಬರುತ್ತದೆ ಎನ್ನುವುದು ಸರಿಯಲ್ಲ. ನನ್ನ ಮಗಳಿಗೆ ಅಷ್ಟು ಓದಲು ಬರುವುದಿಲ್ಲ. ನನ್ನ ಮೊಮ್ಮಗನಿಗೆ ಓದು ಬರುತ್ತದೆ. ನಾನು ನನ್ನ ಮಗನನ್ನು ನಂಬಿ ತಹಶೀಲ್ದಾರ ಕಛೇರಿಗೆ ಹೋಗಿ ಪಹಣಿ ತೆಗೆಸಲು ಪ್ರಯತ್ನ ಪಟ್ಟಿಲ್ಲ. ನನ್ನ ಮಗ ದುಷ್ಟಚಟಕ್ಕೆ ಬಿದ್ದ ನಂತರ ನಾನು ಆತ ಹಿಗೇ ದುಷ್ಟ ಚಟಕ್ಕೆ ಬಿದಿದ್ದಾನೆ ಅವನೊಡೆ ನೆ ಯಾರು ವ್ಯವಹಾರ ಮಾಡಬೇಡಿ ಎಂದು ಪೇಪರ್ನಲ್ಲಿ ನೋಟಿಸ್ ಹಾಕಿಸಿಲ್ಲ ಯಾಕೆಂದರೆ ಹಾಗೇ ಮಾಡಬೇಕು ಎಂದು ಯಾರು ನನಗೆ ಹೇಳಿಲ್ಲ. ನಾನು ದಾವಾ ಆಸ್ತಿಯನ್ನು ನನ್ನ , ನನ್ನ ಮೊಮ್ಮಗ ಹಾಗೂ ನನ್ನ ಮಗಳ ಹೆಸರಿನಲ್ಲಿ ಜಂಟಿಯಾಗಿ ವರ್ಗವಾಣೆ ಮಾಡಿಸಲು ಯಾವುದೇ ಪ್ರಯತ್ನ ಪಟ್ಟಿಲ್ಲ. ನನ್ನ ಗಂಡ ತೀರಿಕೊಂಡ ನಂತರ ನನ್ನ ಮಗನೇ ಕುಟುಂಬದ ಮುಖ್ಯಸ್ಥನಾಗಿರುತ್ತಾನೆ ಎನ್ನುವುದು ಸರಿಯಲ್ಲ. ನನ್ನ ಮಗನೇ ಮನೆಯ ಎಲ್ಲಾ ಜವ್ದಾರಿಯನ್ನು ನೋಡಿಕೂಂಡು ಹೋಗುತ್ತಾನೆ ಎನ್ನುವುದು ಸರಿಯಲ್ಲ. ನನ್ನ ಮಗ ಬ್ಯಾಂಕು ಹಾಗೂ ಇತರೆ ವ್ಯಕ್ತಿಗಳಿಂದ ಪಡೆದುಕೊಂಡಿರುವ ಸಾಲಕ್ಕೆ ನಮ್ಮೆಲ್ಲರ ಸಂಪೂರ್ಣ ಒಪ್ಪಿಗೆ ಇತ್ತು ಎನ್ನುವುದು ಸರಿಯಲ್ಲ. ನನ್ನ ಮಗ ತನ್ನ ಕುಟುಂಬದ ನಿರ್ವಹಣೆಗಾಗಿ ಎಸ್ ಬಿ ಐ ಬ್ಯಾಂಕಿನಿಂದ ಈ ದಾವಾ ಆಸ್ತಿಯ ಮೇಲೆ 4,68,000/- ಸಾಲ

ಪಡೆದುಕೊಂಡಿದ್ದಾನೆ ಹಾಗೂ ಅದರ ಮರು ಪಾವತಿಗಾಗಿ, ಒಕ್ಕುತನದ ಖರ್ಚಿಗಾಗಿ ಡಿ ಹೆಚ್ ಆರ್ ಇವರಿಗೆ ಖರೀದಿ ಖರಾರು ಪತ್ರವನ್ನು ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ಈ ಎಲ್ಲಾ ವಿಷಯದ ಬಗ್ಗೆ ನನಗೆ, ನನ್ನ ಮೊಮ್ಮಗನಿಗೆ ಹಾಗೂ ಮಗಳಿಗೆ ಸಂಪೂರ್ಣ ಮಾಹಿತಿ ಇದೆ ಎನ್ನುವುದು ಸರಿಯಲ್ಲ. ನನ್ನ ಮಗ ಡಿಕ್ರಿ ಹೊಲ್ಡರ್ ಇವರಿಗೆ ಅನ್ಯಾಯ ಮಾಡುವ ಉದ್ದೇಶದಿಂದ ನಮ್ಮಗಳ ಮುಖಾಂತರ ಈ ಸುಳ್ಳು ಅರ್ಜಿಯನುನ ಹಾಕಿಸಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಮಗನ ಪ್ರಚೋದನೆಯಿಂದಲೇ ನಾನು ಈ ಅರ್ಜಿಯನ್ನು ಹಾಕಿದ್ದೇನೆ ಎನ್ನುವುದು ಸರಿಯಲ್ಲ.

ಜೆ ವೆಂಕೋಬ ಹಾಗೂ ಪಿ ನಾಗೇಶ್ವರರಾವ್ ಇವರ ಪರಿಚಯ ಇದೆ. ಅವರು ನಮ್ಮ ಹೊಲದ ಪಕ್ಕದಲ್ಲಿ ಇದ್ದಾರೆ. ಪುನಃ ಸಾಕ್ಷಿಯು ವೆಂಕೋಬ ನನ್ನ ಹೊಲದ ಮಗ್ಗಲಗೆ ಇದ್ದಾನೆ ನಾಗೇಶ್ವರರಾವ್ ನನಗೆ ಪರಿಚಯ ಇದ್ದಾನೆ ಆದರೆ ನಾನು ಮಾತನಾಡುವುದಿಲ್ಲ ಎಂದು ಹೇಳುತ್ತಾರೆ. ನನ್ನ ಹಾಗೂ ನಾಗೇಶ್ವರರಾವ್ ನಡುವೆ ಯಾವುದೇ ವ್ಯಾಜ್ಯ ಇಲ್ಲ ಆದರೆ ನಾನು ಮಾತನಾಡುವುದಿಲ್ಲ. ನನ್ನ ಹಾಗೂ ವೆಂಕೋಬ ಈತನ ನಡುವೆ ಯಾವುದೇ ಜಗಳ ಮಾನಃಸ್ತಾಪ ಇಲ್ಲ. ಈ ಇಬ್ಬರು ವ್ಯಕ್ತಿಗಳು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಅರ್ಜಿಯಲ್ಲಿಯಾಗಲಿ ಸಾಕ್ಷಿ ಪ್ರಮಾಣ ಪತ್ರದಲ್ಲಿಯಾಗಲೀ ಸದರಿ ಎರಡು ವ್ಯಕ್ತಿಗಳ ಬಗ್ಗೆ ಬರೆದಿದ್ದೇನೋ ಇಲ್ಲವೂ ಎಂದು ನನಗೆ ನೆನಪಿಲ್ಲ. ಟಿ ನಾಗೇಶ್ವರರಾವ್ ಹಾಗೂ ಜೆ ವೆಂಕೋಬ ಇವರು ಡಿ ಹೆಚ್ ಆರ್ ರವರ ಖರೀದಿ ಖರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಮಗ ಯಾರ ಕಡೆಯಿಂದ ದವಾ ಭೂಮಿಯನ್ನು ಡಿ ಹೆಚ್ ಆರ್ ರವರಿಗೆ ಎಷ್ಟಕ್ಕೆ ಮಾರಲು ಒಪ್ಪಿದ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಯಾವ ರೀತಿಯಾಗಿ ಮಾರಾಟ ಮಾಡಲು ಮಾತುಕತೆಗೆ ಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಸುಳ್ಳು ಅಪಾದನೆ ಮಾಡಿ ನನ್ನ ಮಗನ ಮಾತನ್ನು ಕೇಳಿ ನ್ಯಾಯಾಲಯದ ಮುಂದೆ ಈ ಅರ್ಜಿಯನ್ನು ಹಾಕಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಗ ಮನೆಯ ಮುಖ್ಯಸ್ಥನಾಗಿ ಖರೀದಿ ಖರಾರು ಪತ್ರವನ್ನು ಬರೆದುಕೊಟ್ಟಿದ್ದರಿಂದ ಅದು ನನ್ನ ಮೇಲೆ ಹಾಗೂ ಉಳಿದ ಎಲ್ಲಾ ಅರ್ಜಿದಾರರ ಮೇಲೆ ಬಂದನಕಾರಿಯಾಗಿರುತ್ತದೆ ಎನ್ನುವುದು ಸರಿಯಲ್ಲ. ನಿಮ್ಮ ಮಗನಿಗೆ ಯಾವುದೇ ದುಷ್ಟ ಚಟಗಳು ಇಲ್ಲ ಆದುದರಿಂದೇಲ ನೀವುಗಳು ಆತನ ವಿರುದ್ಧ ಯಾವುದೇ ಹಿಸ್ಸಾ ದಾವೆ ಹಾಕಿಲ್ಲ ಎನ್ನುವುದು ಸರಿಯಲ್ಲ. ನಾನು ನನ್ನ ಮಗ ಹಾಗೂ ಉಳಿದ ಅರ್ಜಿದಾರರು ಸೇರಿಕೊಂಡು ಡಿಕ್ರಿ ಹೋಲ್ಡರ್ ಈತನಿಗೆ ಅನ್ಯಾಯಾ ಹಾಗೂ ತೊಂದರೆ ಮಾಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಹಾಕಿದ್ದೇವೆ ಎನ್ನುವುದು ಸರಿಯಲ್ಲ. ನ್ಯಾಯಾಲಯದ ತೀರ್ಪುನ್ನು ನೀವು ಹಾಗೂ ನಿಮ್ಮ ಮಗ ಇಂದಿನವರೆಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ತೀರ್ಪು ಆಗಿದ್ದು ನನಗೆ ಗೊತ್ತಿಲ್ಲ ಎಂದು

ಹೇಳುತ್ತಾರೆ. ತೀರ್ಪು ಗೊತ್ತಾದ ನಂತರ ಕೂಡಾ ನೀವು ಅದನ್ನು ಪ್ರಶ್ನಿಸಿಲ್ಲ ಎನ್ನುವುದು ಸರಿ. ಆದುದರಿಂದ ಈ ಅರ್ಜಿಯು ಊರ್ಜಿತ ಆಗುವುದಿಲ್ಲ ಎನ್ನುವುದು ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಅಪಾದನೆ ಮಡಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಗಂಗಾವತಿ.